ಆದರೆ, BWSSB ಯದು ನಮ್ಮ project ಏನಿದೆ, JICA ದಿಂದ loan ತೆಗೆದುಕೊಂಡು ನಾವು ಮಾಡುತ್ತಿರುವುದು. ಇಲ್ಲಿಯವರೆಗೆ ನಾವು 500 ದಶಲಕ್ಷ ನೀರು ತರುವುದಕ್ಕೆ ಹೊರಟಿರುವುದು. ಯಾವುದೇ ಕಾರಣಕ್ಕೆ ಮಧ್ಯೆ ಅದನ್ನು tap ಮಾಡುವುದಕ್ಕೆ ಬಿಡುವುದಿಲ್ಲ, ಆಗುವುದಿಲ್ಲ. ಆದರೂ ಕೂಡ, ಮಾನ್ಯ ಬಾಲಕೃಷ್ಣರವರು ಹೇಳುತ್ತಿರುವುದರಿಂದ ನಾವು RDPR ಜೊತೆ ಚರ್ಚೆ ಮಾಡಿ ಮಾಡುತ್ತೇವೆ. ಇನ್ನೊಂದು ಹೆಜ್ಜೆ ಮುಂದೆ ಹೋಗಿ ಆ ಬೈರಮಂಗಲದ ಕೆರೆ ಹತ್ತಿರ ಏನು ತ್ಯಾಜ್ಯ ಸೇರುತ್ತಿದೆ, ಅದನ್ನು ನಿಲ್ಲಿಸಲಿಕ್ಕೆ RDPR ಮತ್ತು ನಾವು ಸೇರಿಕೊಂಡು ಅಲ್ಲಿಯೇ ಒಂದು STP ಹಾಕುವುದಕ್ಕೂ ಕೂಡ ನಾವು ಹೆಜ್ಜೆಯನ್ನು ನಾವು ತೆಗೆದುಕೊಳ್ಳುತ್ತೇವೆ.

ಕ್ರೀಡಾಂಗಣ ನಿರ್ಮಾಣ

83 (187) ಶ್ರೀ ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ):– ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ?

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಇಂಡಿ ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣ ಕಾರ್ಯ ಎಂದು ಪ್ರಾರಂಭಿಸಲಾಯಿತು ಮತ್ತು ಈ ಕಾಮಗಾರಿ ಯಾವ ಹಂತದಲ್ಲಿದೆ?

ಆ) ನಿರ್ಮಿತಿ ಕೇಂದ್ರದವರು ಈ ಕಾಮಗಾರಿಯನ್ನು ಸರಿಯಾಗಿ ಮಾಡದೇ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು):–

ಅ) ಕ್ರೀಡಾಂಗಣದ ಕಾಮಗಾರಿಯು ದಿನಾಂಕ: 21–03–2011 ರಂದು ಪ್ರಾರಂಭಿಸಲಾಗಿದೆ.

ಇಲ್ಲಿಯವರೆಗೆ ಮೈದಾನ ಸಮತಟ್ಟುಗೊಳಿಸುವಿಕೆ ಹಾಗೂ ಪೆವಿಲಿಯನ್ ಕಟ್ಟಡದ ನಿರ್ಮಾಣದ ತಳಪಾಯ ಹಾಕುವ ಕಾರ್ಯ ಪ್ರಗತಿಯಲ್ಲಿದೆ.

ಆ) ಉದ್ದೇಶಿತ ಕ್ರೀಡಾಂಗಣವನ್ನು ನಿರ್ಮಿಸಲು ನಿರ್ಮಿತಿ ಕೇಂದ್ರದವರಿಗೆ ವಹಿಸಲಾಗಿತ್ತು. ಆದರೆ ಉದ್ದೇಶಿತ ಕ್ರೀಡಾಂಗಣದ ಪ್ರದೇಶದ ಪೈಕಿ ಭಾಗಶ: ಪ್ರದೇಶವು

ಅತಿಕ್ರಮಣಗೊಂಡಿತ್ತು. ಇದೀಗ ಅತಿಕ್ರಮಣ ಪ್ರದೇಶವನ್ನು ತೆರವುಗೊಳಿಸಲಾಗಿದೆ ಹಾಗೂ ಸ್ಥಳೀಯ ನಿರ್ಮಿತಿ ಕೇಂದ್ರದವರಿಗೆ ಕಾಮಗಾರಿಯನ್ನು ವಿಳಂಬ ಮಾಡದೇ ತೀವ್ರಗತಿಯಲ್ಲಿ ಪೂರ್ಣಗೊಳಿಸಲು ಸೂಚಿಸಲಾಗಿದೆ. ಈ ಕಾಮಗಾರಿಗೆ ತಗಲುವ ಒಟ್ಟಾರೆ ಅಂದಾಜು ವೆಚ್ಚ ರೂ. 89–35 ಲಕ್ಷಗಳ ಪೈಕಿ, ರೂ. 70.00 ಲಕ್ಷಗಳನ್ನು ಸರ್ಕಾರವು ಭರಿಸಲಿದ್ದು, ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ ಹಾಗೂ ಈ ಉದ್ದೇಶಕ್ಕಾಗಿ ರೂ. 35.00 ಲಕ್ಷಗಳನ್ನು ನಿರ್ಮಿತಿ ಕೇಂದ್ರ, ಬಿಜಾಪುರ ಇವರಿಗೆ ಬಿಡುಗಡೆ ಮಾಡಲಾಗಿದೆ.

ತುರ್ತಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಡಾ: ಬಗಲಿ ಸಾರ್ವಭೌಮ ಸಾತಗೌಡ: ಈ ಕಾಮಗಾರಿಯನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸಲಾಗಿದೆ. ನಿರ್ಮಿತಿ ಕೇಂದ್ರದಲ್ಲಿ Retired Engineers ಇದ್ದು, ಯಾವಾಗಲೂ ಅವರು ಆಸ್ಪತ್ರೆಯಲ್ಲಿಯೇ ಇರುತ್ತಾರೆ. ಈಗ ಇವರಿಂದ ಯಾವುದೇ ತರಹದ supervision ಆಗುತ್ತಿಲ್ಲ. ಹೀಗಾಗಿ ಒಂದು ಕಾಮಗಾರಿ ಕಳಪೆ ಮಟ್ಟದ ಕಾಮಗಾರಿಯಾಗಿದೆ ಎಂದು ಜನರು ಆರೋಪ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಮತ್ತು ಆದಷ್ಟು ಬೇಗನೆ ಈ ಕಾಮಗಾರಿ ಪೂರ್ಣ ಆಗುವಂತೆ ನಿರ್ದೇಶನ ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ: ನಿರ್ಮಿಸಿ ಕೇಂದ್ರದಿಂದ ಯಾವ ಕಾಮಗಾರಿಯೂ ಸರಿಯಾಗಿ ನಡೆದಿಲ್ಲ. ಬಹಳಷ್ಟು ಕಾಮಗಾರಿ ಕಳಪೆ ಕಾಮಗಾರಿ ಆಗಿರುವುದು ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) ಇದು ಇಂಡಿ ಕ್ಷೇತ್ರಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ನಿರ್ಮಿಸಿ ಕೇಂದ್ರದ ಬಗ್ಗೆ ನಂತರ ನಾವು ನೀವು ಬೇರೆ ಮಾತನಾಡೋಣ. ಅವರಿಗೆ ಸ್ವಲ್ಪ ಆಟ ಆಡಲಿಕ್ಕೆ ದೊಡ್ಡ ಮೈದಾನ ಬೇಕೆಂದು ಕೇಳಿದ್ದಾರೆ. ಅದರ ಬಗ್ಗೆ ನಾನು ಉತ್ತರ ಕೊಡುತ್ತೇನೆ. ಈಗಾಗಲೇ ಇದರ ಕಾಮಗಾರಿಯನ್ನು ಅತ್ಯಂತ ವೇಗವಾಗಿ ತೆಗೆದುಕೊಂಡು ಹೋಗುವಂಥ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಸ್ವಲ್ಪ ಅದರಲ್ಲಿ land acquisition, encroachment problem ಇದ್ದು ಅದನ್ನೆಲ್ಲವನ್ನು ತೆಗೆದು ಅಲ್ಲಿ ಶೀಘ್ರವಾಗಿ ಕೆಲಸ ನಡೆಯುತ್ತಿದೆ. ಡಾ: ಸಾರ್ವಭೌಮ ಬಗಲಿಯವರ ಆತಂಕ ಏನೆಂದರೆ, ನಿರ್ಮಿತಿ ಕೇಂದ್ರದಿಂದ ನಡೆಸುತ್ತಿರುವಂಥ ಕಾಮಗಾರಿಯ ಮಟ್ಟದಲ್ಲಿ ಸ್ವಲ್ಪ ಕಳಪೆ ಅನಿಸುತ್ತಿದೆ ಎಂದು ಉಲ್ಲೇಖ ಮಾಡಿದ್ದಾರೆ. ತಕ್ಷಣ ಇದನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಯಿಂದ

ತನಿಖೆ ನಡೆಸಿ ಅಂಥದ್ದು ಏನಾದರೂ ಕಳಪೆ ಕಾಮಗಾರಿ ಆಗಿದ್ದರೆ ಸೂಕ್ತ ಕೈಗೊಳ್ಳುತ್ತೇವೆ ಮತ್ತು ಆದಷ್ಟು ಶೀಘ್ರವಾಗಿ ಇದನ್ನು ಮುಗಿಸುವಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಜಿಲ್ಲಾಧಿಕಾರಿಗಳೇ ಅದಕ್ಕೆ ಅಧ್ಯಕ್ಷರು. ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ.

ಅಧ್ಯಕ್ಷರು: ಕುಳಿತುಕೊಳ್ಳಿ. ರವಿ ಸುಬ್ರಹ್ಮಣ್ಯರವರನ್ನು ಕರೆದಿದೇನೆ.

ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ರೋಗಿಗಳಿಗೆ ಡಯಾಲಿಸಿಸ್

84 (421) ಶ್ರೀ ರವಿ ಸುಬ್ರಹ್ಮಣ್ಯ ಎಲ್.ಎ (ಬಸವನಗುಡಿ):– ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ?

ಅ) ರಾಜ್ಯದಲ್ಲಿ ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಯಾಲಿಸಿಸ್ ಯಂತ್ರಗಳೆಷ್ಟು; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು) HIV ಹಾಗೂ ICP [HBS] ಯಿಂದ ಬಳಲುತ್ತಿರುವ ರೋಗಿಗಳಿಗೆ ಎಷ್ಟು ಡಯಾಲಿಸಿಸ್ ಯಂತ್ರಗಳನ್ನು ಕಾಯ್ದಿರಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು);

ಇ) ಡಯಾಲಿಸಿಸ್ ಯಂತ್ರಗಳ ನಿರ್ವಹಣೆ ಮಾಡಲು ತಾಲ್ಲೂಕು ಕೇಂದ್ರಗಳಲ್ಲಿ ತಜ್ಞರಿದ್ದಾರೆಯೇ; (ಜಿಲ್ಲಾವಾರು ವಿವರ ನೀಡುವುದು);

ಈ) 2011–12ನೇ ಸಾಲಿನಲ್ಲಿ ಡಯಾಲಿಸಿಸ್ ಯಂತ್ರಗಳ ಖರೀದಿ ಹಾಗೂ ನಿರ್ವಹಣೆಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಕೈಗೊಂಡ ಕ್ರಮಗಳೇನು ಹಾಗೂ ಇದಕ್ಕೆ ತಗಲುತ್ತಿರುವ ವೆಚ್ಚವೆಷ್ಟು; (ಜಿಲ್ಲಾವಾರು ವಿವರ ನೀಡುವುದು);

ಉ) ರಾಜ್ಯದಲ್ಲಿ 2011 ರಲ್ಲಿ ಡಯಾಲಿಸಿಸ್ ಚಿಕಿತ್ಸೆ ಪಡೆದ ರೋಗಿಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು):–

ಅ) ರಾಜ್ಯಾದ್ಯಂತ ಕಿಡ್ನಿ ವೈಫಲ್ಯದಿಂದ ಬಳುತ್ತಿರುವ ರೋಗಿಗಳ ಸಮೀಕ್ಷೆಯನ್ನು